## ಆ ಕನಸಲ್ಲಿ...

ಗುಂಡ, ತನ್ನ ಗೆಳೆಯ ಕಿಟ್ಟಿ ಜೊತೆಯಲ್ಲಿ ಮಾತಾಡುತ್ತಾ ಹೋಗುತ್ತಿದ್ದಾಗ ಹೇಳಿದ, 'ನೋಡೋ ಕಿಟ್ಟಿ, ರಾತ್ರಿ ಒಂದು ಕೆಟ್ಟ ಕನಸು ಕಂಡೆ, ನನ್ನ ಸುತ್ತಾ ಹುಡುಗಿಯರಿದ್ದರು'.
ಅದಕ್ಕೆ ಕಿಟ್ಟಿ, 'ನಿನ್ನ ಸುತ್ತ ಹುಡುಗಿಯರಿದ್ದರು ಅಂದಮೇಲೆ ಅದು ಕೆಟ್ಟ ಕನಸಾಗಲು ಹೇಗೆ ಸಾಧ್ಯ?' ಎಂದು ಕೇಳಿದ. 'ಕಿಟ್ಟಿ, ಕನಸಲ್ಲಿ ನಾನೂ ಸಹ ಹುಡುಗಿಯೇ ಆಗಿದ್ದೆ!' ಎಂದ ಗುಂಡ ತುಂಟ ನಗು ನಗುತ್ತ.

**ಶಂಕರೇಗೌಡ ತುಂಬಕೆರೆ**





## ಖಾಲಿ ಕಾಗದದ ಜೆರಾಕ್ಸ್

ಖಾಸಗಿ ಕಂಪನಿಯೊಂದು ಜವಾನನ ಹುದ್ದೆಗೆ ಅರ್ಜಿ ಆಹ್ವಾನಿಸಿತ್ತು. ನೂರಾರು ಜನ ಅರ್ಜಿ ಹಾಕಿದ್ದರು. ಅವರಲ್ಲಿ ಐದು ಜನರನ್ನು ಸಂದರ್ಶನಕ್ಕೆ ಕರೆಯಲಾಗಿತ್ತು. ಸಂದರ್ಶಕರು ಆ ಐದೂ ಜನರಿಗೆ ಪ್ರತ್ಯೇಕವಾಗಿ ಖಾಲಿ ಕಾಗದದ ಹಾಳೆ ಕೊಟ್ಟು ಜೆರಾಕ್ಸ್ ಮಾಡಿಸಿಕೊಂಡು ಬರುವಂತೆ ಹೇಳಿ ಕಳಿಸಿದರು. ನಾಲ್ಕು ಜನರು ಖಾಲಿ ಕಾಗದವನ್ನು ಯಾಕೆ ಜೆರಾಕ್ಸ್ ಮಾಡಿಸುವುದು ಎಂದು ವಾಪಸ್ ಬಂದಿದ್ದರು. ಗುಂಡ ಮಾತ್ರ ಜೆರಾಕ್ಸ್ ಮಾಡಿಸಿಕೊಂಡು ಬಂದಿದ್ದ. ಸಂದರ್ಶಕರು ಗುಂಡನನ್ನು ಮಾತ್ರ ಆಯ್ಕೆ ಮಾಡಿದರು. ಆಯ್ಕೆ ಆಗದವರು ಗುಂಡನ ಆಯ್ಕೆಗೆ ಕಾರಣ ಕೇಳಿದಾಗ ಸಂದರ್ಶಕರು ಹೇಳಿದರು: 'ನಾವು ಹೇಳಿದ ಕೆಲಸವನ್ನಷ್ಟೇ ಮಾಡುವವರು ನಮಗೆ ಬೇಕು. ತಮ್ಮ ಬುದ್ಧಿ ಉಪಯೋಗಿಸುವವರು ಬೇಡ...'

**ಸಿ. ವೇಣುಗೋಪಾಲ್**

ಚಿತ್ರಗಳು: ಗಣೇಶ ಆಚಾರ್ಯ